ಅಂಗನವಾಡಿ ಕೇಂದ್ರಗಳಲ್ಲಿ ಕಳಪೆ ಗುಣಮಟ್ಟದ ಪೌಷ್ಟಿಕ ಆಹಾರ ಪೂರೈಕೆ

931 (968) ಶ್ರೀ ಶಿವಶಂಕರ್ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿಗಳಲ್ಲಿ ಕಳಪೆ ಗುಣಮಟ್ಟದ ಪೌಷ್ಟಿಕ ಆಹಾರ ಪೂರೈಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸರಬರಾಜು ಕಂಪನಿಗಳ ಬಗ್ಗೆ ತಪಾಸಣೆ ಗುಣಮಟ್ಟದ ಪರೀಕ್ಷೆಗೆ ಸರ್ಕಾರ ತೆಗೆದುಕೊಂಡಿರುವ ಮಾನದಂಡವೇನು; ಇದರ ಬದಲಿಗೆ ಅವರಿಗೂ ಪೌಷ್ಟಿಕ ಅಂಶಗಳಿರುವ ಬಿಸಿಯೂಟ ಕಾರ್ಯಕ್ರಮ ಹಮ್ಮಿಕೊಳ್ಳಲು ಸಾಧ್ಯವಿಲ್ಲವೇ;

ಇ) ಅಂಗನವಾಡಿ ಮಕ್ಕಳಿಗೆ ಉಚಿತ ಸಮವಸ್ತ್ರ ಒದಗಿಸಲು ಸಾಧ್ಯವಿಲ್ಲವೇ; ಕೇಂದ್ರ ಅಂಗನವಾಡಿ ಕಾರ್ಯಕರ್ತೆಯರ ಸಂಭಾವನೆ ಹೆಚ್ಚಿಸುವ ಬಗ್ಗೆ ರಾಜ್ಯ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಯಾವ ಹಂತದಲ್ಲಿದೆ?

ಶ್ರೀ ಪಿ.ಎಂ ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಮಹಿಳಾ, ಪೂರಕ ಪೌಷ್ಟಿಕ ಆಹಾರ ಉತ್ಪಾದನೆ ಹಾಗೂ ತರಬೇತಿ ಕೇಂದ್ರಗಳು ಸರಬರಾಜು ಸಂಸ್ಥೆಗಳಾಗಿದ್ದು ಇವರು ತಯಾರು ಮಾಡುವ ಆಹಾರ ಪದಾರ್ಥಗಳಲ್ಲಿ ಇರುವ ಪ್ರೋಟೀನ್, ಕ್ಯಾಲೋರಿ, ಮೈಕ್ರೋ ನ್ಯೂಟ್ರಿಯಂಟ್ಸ್‌ಗಳು, ನಿಗದಿತ ಪ್ರಮಾಣದ ಪರೀಕ್ಷೆಗೆ ಒಳಪಡಿಸುವುದು ಬ್ಯಾಕ್ಟೀರಿಯ, ಫಂಗಸ್‌ಗಳಿಂದ ಆಹಾರವು ಹಾನಿಗೊಳಗಾಗಿರುವ – ಬಗ್ಗೆ ಗುಣಮಟ್ಟವನ್ನು ಪರೀಕ್ಷಿಸಲು ಆಯ್ದ ಸ್ಯಾಂಪಲ್ಸ್‌ಗಳನ್ನು ಪ್ರತಿ ಶಿಶು ಅಭಿವೃದ್ಧಿ ಯೋಜನೆಯಿಂದ ಕೇಂದ್ರ ಸರ್ಕಾರದ ಸಂಸ್ಥೆಯಾದ ಆಹಾರ ಮತ್ತು ಪೋಶಾಹಾರ ಮಂಡಲಿ ಚೆನ್ನೈ ಇಲ್ಲಿಗೆ ಕಳುಹಿಸಲಾಗುತ್ತಿದೆ.

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಫಲಾನುಭವಿಗಳಿಗೆ ತಿನ್ನಲು ಸಿದ್ಧವಿರುವ ಹಾಗೂ ಬೇಯಿಸಲು ಸಿದ್ಧವಿರುವ ಆಹಾರದ ಮಿಶ್ರಣಗಳನ್ನು ನೀಡಲಾಗುತ್ತಿದೆ. ಫಲಾನುಭವಿಗಳಿಗೆ ನೀಡುತ್ತಿರುವ ಈ ಆಹಾರ ಮಿಶ್ರಣಗಳಲ್ಲಿ ಕೇಂದ್ರ ಸರ್ಕಾರ ನಿಗದಿ ಪಡಿಸಿದ ಪ್ರಮಾಣದಲ್ಲಿ ಕ್ಯಾಲೋರಿ, ಪ್ರೋಟೀನ್

ಹಾಗೂ ಮೈಕ್ರೋ ನ್ಯೂಟ್ರೀಯಂಟ್ಸ್ ಇರುವಂತೆ ಕ್ರಮ ವಹಿಸಲಾಗುತ್ತಿದೆ. ಈ ಮೈಕ್ರೋ ನ್ಯೂಟ್ರೀಯಂಟ್ಸ್‌ಗಳ ಜೊತೆ ಹೆಚ್ಚು ಪ್ರೋಟೀನ್ ಮತ್ತು ಕ್ಯಾಲೋರಿಗಳ ಫಾರ್ಟಿಫೈಡ್ ಆದ ಆಹಾರ ಪದಾರ್ಥಗಳಿಂದ ಕೂಡಿದ್ದು ಇದರಲ್ಲಿ 50% ಆರ್.ಡಿ.ಎ ದೊರಕುವಂತೆ ನೋಡಿಕೊಳಲಾಗುವುದು ಇದರಿಂದ ರಕ್ತಹೀನತೆ ಮಕ್ಕಳಲ್ಲಿ ಹಾಗೂ ಗರ್ಭಿಣಿ ಬಾಣಂತಿಯಲ್ಲಿರುವ ಅಪೌಷ್ಠಿಕತೆಯನ್ನು ಕಡಿಮೆ ಮಾಡಲು ವೈಜ್ಞಾನಿಕವಾಗಿ ಉತ್ತಮ ಆಹಾರ ಎಂದು ಸರ್ಕಾರ ಪರಿಗಣಿಸಿರುತ್ತದೆ.

ಇ) ಉಚಿತ ಸಮವಸ್ತ್ರ ಒದಗಿಸುವ ಪ್ರಸ್ತಾಪವಿರುವುದಿಲ್ಲ ಕೇಂದ್ರ ಸರ್ಕಾರವು ದಿನಾಂಕ: 1.04.2008 ರಂದು ಹಾಗೂ ರಾಜ್ಯ ಸರ್ಕಾರವು ದಿನಾಂಕ: 1.04.2009 ರಂದು ಗೌರವಧನವನ್ನು ಹೆಚ್ಚಿಸಿದ್ದು. ಸದ್ಯ ರಾಜ್ಯ ಸರ್ಕಾರದ ವತಿಯಿಂದ ರೂ. 1000 ಹಾಗೂ ರೂ.500 ಹಾಗೂ ಕೇಂದ್ರ ಸರ್ಕಾರದಿಂದ 1500 ಹಾಗೂ ರೂ.750 ಕ್ರಮವಾಗಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ನೀಡುತ್ತಿದ್ದು ಸದ್ಯ ಗೌರವಧನ ಹೆಚ್ಚಿಸುವ ಪ್ರಸ್ತಾಪವಿರುವುದಿಲ್ಲ.

ರಾಜ್ಯದಲ್ಲಿ ಇರುವ ಬಂಜಾರ ತಾಂಡಾಗಳು

932 (1295) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್ (ಗೌರಿಬಿದನೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ರಾಜ್ಯದಲ್ಲಿ ಅಭಿವೃದ್ಧಿಪಡಿಸಲಾದ ಬಂಜಾರ ತಾಂಡಾಗಳೆಷ್ಟು, ಅಭಿವೃದ್ಧಿಗಾಗಿ ಹಂಚಿಕೆ ಮಾಡಲಾದ ಹಣ ಎಷ್ಟು (ಜಿಲ್ಲಾವಾರು ವಿವರ ಒದಗಿಸುವುದು);

ಶ್ರೀ ಡಿ. ಸುಧಾಕರ್ (ಸಮಾಜ ಕಲ್ಯಾಣ ಸಚಿವರು) :

ರಾಜ್ಯದಲ್ಲಿ ಒಟ್ಟು 2.742 ಬಂಜಾರ ತಾಂಡಾಗಳು ಇರುತ್ತವೆ. ಲಂಬಾಣಿ ಜನಸಂಖ್ಯೆಯ ಆಧಾರದ ಮೇಲೆ ಲಂಬಾಣಿ ತಾಂಡಾಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಬೀದಿ ದೀಪ, ಚರಂಡಿ ನಿರ್ಮಾಣ, ರಸ್ತೆ ಅಭಿವೃದ್ಧಿ, ಸಾರ್ವಜನಿಕ ಶೌಚಾಲಯ ಇದೇ ಮೊದಲಾದ ಕಾಮಗಾರಿಗಳನ್ನು ಕೈಗೊಳ್ಳಲು ರೂ.10.00 ಕೋಟಿಗಳನ್ನು ನಿಗಧಿಪಡಿಸಿದ್ದು, ಈವರೆಗೆ ರೂ.836.07 ಲಕ್ಷಗಳನ್ನು ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ